ಸುದ್ದಿ ಸಿಂಚನ

ಕ.ಕರ್ನಾಟಕ ಉದ್ಯೋಗ ಮೇಳದಲ್ಲಿ 10,147 ಉದ್ಯೋಗಾಕಾಂಕ್ಷಿ ಭಾಗಿ

ಕಲಬುರಗಿ: ಕಲಬುರಗಿಯಲ್ಲಿ ಬುಧವಾರ ನಡೆದ ಉದ್ಯೋಗ ಮೇಳದಲ್ಲಿ ಬರೋಬ್ಬರಿ 10, 147 ಉದ್ಯೋಗಾಕಾಂಕ್ಷಿಗಳು ಪಾಲ್ಗೊಂಡಿದ್ದರು. ಸ್ಥಳದಲ್ಲೇ 1, 235 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡಲಾಗಿದೆ. ಇದಲ್ಲದೆ ಮೇಳದಲ್ಲಿ ಪಾಲ್ಗೊಂಡವರ ಪೈಕಿ ವಿದ್ಯಾರ್ಹತೆ ಆಧಾರದಲ್ಲಿ 4,448 ಅಭ್ಯರ್ಥಿಗಳ ಹೆಸರು ಉದ್ಯೋಗಕ್ಕಾಗಿ ಅಂತಿಮಗೊಳಿಸಲಾಗಿದೆ. ಆನ್‌ಲೈನ್ ಮೂಲಕ 29, 090 ಅಭ್ಯರ್ಥಿಗಳು ತಮ್ಮ ಹೆಸರು ನೋಂದಣಿ ಮಾಡಿಕೊಂಡಿದ್ದರು. ಉದ್ಯೋಗ ಮೇಳದಲ್ಲಿ ಉದ್ಯೋಗದಾತ 248 ಕಂಪನಿಗಳು ಪಾಲ್ಗೊಂಡು ಸಂದರ್ಶನ ನಡೆಸಿ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಿವೆ.

ಸಮಾಜ ಸೇವಕನ ಮದುವೆ ವಾರ್ಷಿಕೋತ್ಸವ ಆಚರಣೆ

ಕಮಲಾಪುರ: ಮದುವೆ ವಾರ್ಷಿಕೋತ್ಸವ ವೈಯಕ್ತಿಕ ಆಚರಣೆಯ ಭಾಗವಾದರೂ ಇಲ್ಲಿನ ದಸ್ತಾಪುರ ಗ್ರಾಮದಲ್ಲಿರುವ ಸಮಾಜ ಸೇವಕ, ಬಂಗಾರದ ವರ್ತಕನಾದ ವೈಜುನಾಥ ದಸ್ತಾಪುರ ವಿವಾಹ ವಾರ್ಷಿಕೋತ್ಸವ ಇಡೀ ಊರಿನ ಗ್ರಾಮಸ್ಥರು ಹಾಗೂ ಅವರ ಬೆಂಬಲಿಗರು ಸೇರಿಕೊಂಡು ಅನಾಥ ಆಶ್ರಮ ಹಾಗೂ ವೃದ್ದಾಶ್ರಮಗಳಲ್ಲಿ ಅನ್ನ ದಾಸೋಹ ಮಾಡುವ ಮೂಲಕ ಆಚರಿಸಿ ಸಂಭ್ರಮಿಸಿದರು. ದಸ್ತಾಪುರ ಗ್ರಾಮದಲ್ಲಿ ವೈಜನಾಥ ಮಾಣಿಕಪ್ಪ ದಸ್ತಾಪುರ ರೈತರ ಮಕ್ಕಳು. ಪರಿಶ್ರಮದಿಂದ ಇಂದು ತಾವು ಬೆಳೆದದ್ದಲ್ಲದೆ ಇತರರಿಗೂ ಮಾದರಿಯಾಗಿದ್ದಾರೆ, ಇವರು ಪ್ರತಿ ವರ್ಷ ಅನ್ನ ದಾಸೋಹ, ಹಾಗೂ ಅವರ ತಂದೆಯ ಪುಣ್ಯ ಸ್ಮರಣೆ ನಿಮಿತ್ಯ ತಾಲೂಕಿನ ಸುತಾ ಮುತಾ ಹಳ್ಳಿಗಳ ಬಡ ಜನರಿಗೆ ಉಚಿತವಾಗಿ ಶ್ರೀ ರೇವಣಸಿದ್ದೇಶ್ವರ ಜನ್ಮ ಸ್ಥಳವಾದ ಕೊಲಿಪಾಕಿ, ಹಾಗೂ ಕಾಶಿ ರಾಮೇಶ್ವರ, ತಿರುಪತಿ ತಿಮ್ಮಪ್ಪನ ದರ್ಶನಕ್ಕೆ,ತುಳಜಾಪು ಅಂಬಾಭವಾನಿ,ಮತ್ತು ಪ್ರತಿ ವರ್ಷದಲ್ಲಿ ಎರಡು ಬಾರಿ ಸುಮಾರು 200 ರಿಂದ 300 ಜನರಿಗೆ ಉಚಿತವಾಗಿ ಪ್ರವಾಸ ಕೈಗೊಂಡು ದೇವರ ದರ್ಶನ ಮಾಡಿಸಿ ಗಮನ ಸೆಳೆದಿದ್ದಾರೆ.

ಸರ್ಕಾರಿ ಶಾಲೆಯ ಬಡ ಮಕ್ಕಳಿಗೆ ಅವರ ತಂದೆಯ ಪುಣ್ಯ ಪುಣ್ಯ ಸ್ಮರಣೆ ದಿನದಂದು ಪ್ರತಿವರ್ಷ 500 ರಿಂದ ಸಾವಿರ ಮಕ್ಕಳಿಗೆ ಹೈಸ್ಕೂಲ್ ಬ್ಯಾಗ್ ಬುಕ್ಸ್ ಪೆನ್ನು ನೀಡಿದ್ದಾರೆ. ಅನ್ನ ದಾಸೋಹ, ಬಡ ಕುಟುಂಬಗಳಿಗೆ ದಿನಸಿ ಕಿಟ ಹಾಗೂ ಮಠ ಮಂದಿರಗಳಿಗೆ ದಾನಧರ್ಮ ಮಾಡೋದು ಇವರ ರಕ್ತಗತ ಗುಣವಾಗಿದೆ. ಇಂದಿಗೂ ರಾಜಕೀಯವಾಗಿ ಯಾವ ಪಕ್ಷದಲ್ಲೂ ಗುರುತಿಸಿಕೊಳ್ಳದೆ ಇವರು ಜನಮುಖಿ ಕೆಲಸ ಮಾಡುತ್ತಲೇ ಸಾಗಿದ್ದಾರೆ. ವೈಜನಾಥರ ಈ ಕೆಲಸಗಳು ಜನಮನ ಸೆಳೆಯುತ್ತಿವೆ.

ಕಲಬುರಗಿಯಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಸಂದರ್ಶನದಲ್ಲಿ ಆಯ್ಕೆಯಾದ ಭಾಗ್ಯಶ್ರೀ, ಚೇತನ್, ಸೈಯ್ಯದ್ ಇಮ್ರಾನ್ ಸೇರಿದಂತೆ 10 ಅಭ್ಯರ್ಥಿಗಳಿಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ಸಾಂಕೇತಿಕವಾಗಿ ನೇಮಕಾತಿ ಪತ್ರ ವಿತರಿಸಿ ಶುಭ ಕೋರಿದರು.

ಬೀದರಿನ ಯೋಗೀಶ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ವಿಶ್ವ ಕಲಾ ದಿನಾಚರಣೆ ನಿಮಿತ್ತ ವಿಶ್ವ ಶ್ರೇಷ್ಠ ಚಿತ್ರಕಲಾವಿದರಾದ ಲಿಯೋನಾರ್ಡೋಡ ವೀಚಿಯ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಎಲ್ಲಾ ಮಕ್ಕಳು ಕೇಕ್ ಕತ್ತರಿಸಿ ಸಂಭ್ರಮಿಸಿದರು.

ಹುಲಸೂರು ತಾಲೂಕಿನ ಗೋರ್ಟಾ ಗ್ರಾಮದಲ್ಲಿ ವಚನ ವಿಜಯೋತ್ಸವ ಹಾಗೂ ಅಕ್ಕ ಮಹಾದೇವಿ ಜಯಂತಿ ನಿಮಿತ್ತ ನಡೆದ ವಚನ ಗ್ರಂಥದ ಮೆರವಣಿಗೆಯಲ್ಲಿ ಸಾವಿರಾರು ಭಕ್ತರು ಭಾಗವಹಿಸಿರುವುದು.

ಆರ್‌ಎಸ್‌ಎಸ್ ಕಚೇರಿ ಮೇಲೆ ಇ.ಡಿ ದಾಳಿ ಮಾಡಬೇಕು

ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ | ದೇಶದ ಜಿಲ್ಲೆಗಳಲ್ಲಿ 600 ಆರ್‌ಎಸ್‌ಎಸ್, ಬಿಜೆಪಿ ಅತ್ಯಾಧುನಿಕ ಕಚೇರಿ ಕಟ್ಟಲು ಹಣ ಎಲ್ಲಿಂದ ಬಂತು?

• **ಕನ್ನಡಪ್ರಭ ವಾರ್ತೆ** ಕಲಬುರಗಿ

ಪ್ರಧಾನಿ ನರೇಂದ್ರ ಮೋದಿ ಜನಪ್ರೀಯತೆ ಕುಗ್ಗುತ್ತಿದ್ದಂತೆಯೇ ಇವೆಲ್ಲ ದಾಳಿ ಶುರು ಆಗ್ತಾವೆ. ಆರ್‌ಎಸ್ ಎಸ್ ಅವರಿಗೆ ಐಟಿ, ಇ.ಡಿ ಇಲ್ವಾ.? ಆರ್ ಎಸ್ ಎಸ್ ಕಚೇರಿಗಳ ಮೇಲೆ ಇ.ಡಿ ದಾಳಿ ಮಾಡಬೇಕು ಎಂದು ಸಚಿವ ಪ್ರಿಯಾಂಕ ಖರ್ಗೆ ಖಾರವಾಗಿ ಖರ್ಗೆ ಪ್ರಶ್ನೆ ಮಾಡಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ 11 ವರ್ಷಗಳಿಂದ ಕೇಂದ್ರ ಸರ್ಕಾರ ಐಟಿ, ಇ.ಡಿಯನ್ನು ಅಸ್ತ್ರವನ್ನಾಗಿ ಬಳಸಿಕೊಳ್ತಿದೆ. ಇಷ್ಟು ವರ್ಷ ಅವ್ರು ಎಲ್ಲಿ ಮನಿಲಾಂಡ್ರಿಗ್ ಆಗಿದೆ, ಹೇಗ್ ಆಗಿದೆ ಅಂತ ಪ್ರೂವ್ ಮಾಡಲು ಆಗಿಲ್ಲ. ಇದು ಎಜಿ, ನ್ಯಾಷನಲ್ ಹೆರಾಲ್ಡ್ ಅಲ್ಲಿ ಇರಬಹುದು, ಬೇರೆ ಸಂಸ್ಥೆಗಳು ನಾಟ್ ಫಾರ್ ಬೆನಿಫಿಟ್ ಸಂಸ್ಥೆಗಳು ಒಂದೂ ರುಪಾಯಿ ಕೂಡ ಅವರು ಡಿವಿಡೆಂಟ್, ಸ್ಯಾಲರಿ ತೊಗೊಳ್ಳುವ ಹಾಗಿಲ್ಲ.

ಆದ್ರು ಕೂಡ ಇವರು ಐಟಿ, ಇ.ಡಿ ಅವರು ವೈಯುಕ್ತಿಕ ರಾಜಕೀಯ ದ್ವೇಷ ಸಾಧಿಸಲು ಕೇಂದ್ರದಿಂದ ಆರ್ಡರ್‌ತೊಗೊತ್ತಿದ್ದಾರೆ ಎಂದರು.

ಯಾವಾಗ ಮೋದಿ ಅವರ ಜನಪ್ರಿಯತೆ ಕಡಿಮೆ ಆಗುತ್ತೆ, ಬೆಲೆಯೇರಿಕೆ ಬಗ್ಗೆ ಜನ ಪ್ರಶ್ನೆ ಮಾಡ್ತಾರೆ ಆಗ ಮಾತ್ರ ಐಟಿ, ಇ.ಡಿ, ರಾಬರ್ಟ್ ವಾದ್ರಾ, ಸೋನಿಯಾ ಗಾಂಧಿ ನೆನಪಿಗೆ ಬರ್ತಾರೆ. ಇಷ್ಟು ವರ್ಷದಿಂದ ಏನ್ ಮಾಡಿದ್ರೆ, ಏನಾದ್ರು ದಾಖಲೆಗಳು ಸಿಕ್ಕಿವೆಯಾ? ಸ್ಪಷ್ಟತೆ ಸಿಕ್ಕಿದೆಯಾ? ಯಾಕೆ ಚಾರ್ಜಶೀಟ್ ಮಾಡ್ತಿದ್ದಾರೆ ಅಂತ ಗೊತ್ತೇ ಇಲ್ಲ, ಹೀಗೆ ಇವ್ರ ದಾಳಿಗಳು ಸಾಗಿವೆ ಎಂದು ಜರಿದರು.

ಮನಿ ಲ್ಯಾಂಡ್ರಿಂಗ್, ಲ್ಯಾಂಡ್ ಡೀಲ್ ಎಲ್ಲಾಯ್ತು ಅಂತ ಏನಾದ್ರು ದಾಖಲೆಗಳು ಸಿಕ್ಕಿವೆಯಾ.? ಮೋದಿ ಜನಪ್ರಿಯತೆ ಕುಸಿತ ಆಗ್ತಿದೆ. ಇವೆಲ್ಲ ಮುಚ್ಚಿಹಾಕಲು ಇದರ ಮುಖಾಂತರ ನಡೆಯುತ್ತಿದೆ. ಎಲ್ಲಿ ಮನಿ ಲಾಂಡ್ರಿಂಗ್ ಆಗಿದೆ ಅಂತಾ ಹೇಳಲಿ. ನಿಜವಾಗಲೂ ಇವರು ಇಡಿ ದಾಳಿ ಮಾಡಬೇಕಾದ್ರೆ, ಎಲೆಕ್ಷನ್ ಬಾಂಡ್ ಬಗ್ಗೆ ದಾಳಿ ಮಾಡಬೇಕು. ಬಿಜೆಪಿಗೆ ಆರ್‌ಎಸ್ ಎಸ್ ಅವರಿಗೆ ಐಟಿ, ಇ.ಡಿ ಇಲ್ವಾ.? ಆರ್‌ಎಸ್ ಎಸ್ ಕಚೇರಿಗಳ ಮೇಲೆ ಇ.ಡಿ ದಾಳಿ ಮಾಡಬೇಕು ದೇಶದ ಜಿಲ್ಲೆಗಳಲ್ಲಿ 600 ಆರ್‌ಎಸ್ ಎಸ್ ಹಾಗೂ ಬಿಜೆಪಿ ಅತ್ಯಾಧುನಿಕ ಕಚೇರಿಗಳನ್ನು ಕಟ್ಟಿದ್ದಾರೆ ಕಚೇರಿ ಕಟ್ಟಲು ಹಣ ಎಲ್ಲಿಂದ ಬಂತು.? ಎಂದು ಪ್ರಶ್ನಿಸಿದರು.

75 ಜನ ಆರ್‌ಎಸ್ ಎಸ್ ಗೆ ದುಡ್ಡು ಕೊಟ್ಟಿದ್ದಾರಂತೆ, ಅವರ ಮೇಲೆ ಐಟಿ, ಇ.ಡಿ ದಾಳಿ ಆಗಬೇಕು. ನಮ್ಮ ಪಕ್ಷ, ನಮ್ಮ ನಾಯಕರಿಗೆ ಬದ್ದತೆ ಇದೆ. ರಾಜಕೀಯ ದ್ವೇಷ ಸಾಧಿಸಲು ಕೇಂದ್ರ ಸರ್ಕಾರ ಇಡಿ ಐಟಿ ದುರ್ಬಳಕೆ ಮಾಡಿಕೊಳ್ತಿದೆ ಎಂದು ಖರ್ಗೆ ತಿವಿದರು.

ಮುಸ್ಲಿಂರಿಗೆ ಅಲ್ಪಸಂಖ್ಯಾತ ಸ್ಥಾನ ಮಾನ ಏಕೆ ಬೇಕು? ಎನ್ನುವ ಸಿಟಿ ರವಿ ಹೇಳಿಕೆಗೆ ಆಕ್ರೋಶ ಹೊರಹಾಕಿದ ಖರ್ಗೆ, ಸಿಟಿ ರವಿ ಸೋತ ಮೇಲೆ ಸಂಪೂರ್ಣ ಹತಾಷರಾಗಿದ್ದಾರೆ. ಎಂ..ಎಲ್.ಸಿ ಮಾಡಿದ್ದಕ್ಕೆ ಈಗ ತುಸು ಸಮಾಧಾನ ಗೊಂಡಿದ್ದಾರೆ. ಕೇಶವ ಕೃಪಾಕ್ಕೆ ತಾವೆಷ್ಟು ಲಾಯಲ್ ಎನ್ನುವುದು ತೋರಿಸಲು ಹೊರಟಿದ್ದಾರೆ. ಈ ಸಮೀಕ್ಷೆ ಇರಲಿ, ಬಜೆಟ್ ಇರಲಿ ಅಲ್ಪಸಂಖ್ಯಾತ ಪರ ಹೇಗಾಗುತ್ತೆ ? ಸಿಟಿ ರವಿ ಅವರದ್ದು ಅವಿವೇಕತನದ ಪರಮಾವಧಿ ಆಗಿದೆ ಎಂದರು.

ಮೋದಿ, ಶಾ ಮೂಲಕ ಹೆಂಗೆ ವಕ್ಫ ಬಿಲ್ ಮಾಡಿದ್ದಾರೋ ಹಾಗೆ ಮುಸ್ಲಿಂ, ದಲಿತರು, ಆದಿವಾಸಿಗಳು ಈ ದೇಶದ ನಾಗರಿಕರಲ್ಲ ಅಂತ ಬಿಲ್ ಪಾಸ್ ಮಾಡಿಸಲಿ. ಪದೇ ಪದೇ ಇದೇ ರೀತಿ ಮಾತಾಡ್ತಿದಾರೆ ಅಂದ್ರೆ ಅವರಿಗೆ ನಾಚಿಕೆ ಆಗಬೇಕು ಎಂದರು.

ಲಾರಿ ಮಾಲೀಕರ ಮುಷ್ಕರ ಎರಡನೇ ದಿನದಲ್ಲಿ ಮುಂದುವರಿಕೆ ಆಗಿದೆ. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನಿನ್ನೆ ಸಭೆ ಮಾಡಿ ಮಾತುಕತೆ ನಡೆಸಿದ್ದಾರೆ. ಆ ಸಭೆ ವಿಫಲವಾಗಿದೆ ಎಂದು ಮತ್ತೆ ಸಭೆ ನಡೆಸುವುದಾಗಿ ಹೇಳಿದ್ದಾರೆ

ಅಷ್ಟಕ್ಕೂ ಡಿಸೆಲ್ ದರ ಹೆಚ್ಚಳ ಕೇವಲ ನಮ್ಮ ಜವಾಬ್ದಾರಿನಾ ? ಕಚ್ಚಾ ತೈಲ ಬೆಲೆ ಯುಪಿಎ ಸರ್ಕಾರ ಇದ್ದಾಗ ಎಷ್ಟಿತ್ತು ಈಗ ಎಷ್ಟಾಗಿದೆ ? ಅಂತಾರಾಷ್ಟ್ರೀಯ ಮಾರ್ಕಟನಲ್ಲಿ ಕಚ್ಚಾ ತೈಲ ಬೆಲೆ ಹೆಚ್ಚಿದ್ದರೂ ನಮ್ಮ ಸರ್ಕಾರ ತೈಲ ಬೆಲೆ ಹೆಚ್ಚಳ ಮಾಡಿರಲಿಲ್ಲ. ಇದೀಗ ಅಲ್ಲಿ ಕಚ್ಚಾ ತೈಲ ಬೆಲೆ ಕಡಿಮೆಯಾಗಿದ್ದರೂ ಹತ್ತು ವರ್ಷಗಳಿಂದ ಡಿಸಲ್ ಪೆಟ್ರೋಲ್ ದರ ಹೆಚ್ಚಿಸುತ್ತಲೇ ಇದ್ದಾರೆ. ಈಗ ಕಚ್ಚಾ ತೈಲ ದರ ಕಡಿಮೆ ಆಗಿದ್ದರೂ ಕೇಂದ್ರ ಸರಕಾರ ಕಡಿಮೆ ಮಾಡದಿರುವುದು ಅನ್ಯಾಯ ಆಗಲ್ಲವಾ ? .10 ವರ್ಷಗಳ ಹಿಂದೆ ಎಷ್ಟಿತ್ತೋ ಅಲ್ಲಿಗೆ ತನ್ನಿ ಎಲ್ಲಾ ಸರಿಯಾಗುತ್ತೆ. ನೀವು ದರ ಹೆಚ್ಚಳ ಮಾಡಿದ್ರೆ ದೇಶದ ಹಿತಕ್ಕೆ, ನಾವು ಮಾಡಿದ್ರೆ ಅನ್ಯಾಯನಾ ? ಎಂದು ಖರ್ಗೆ ಪ್ರಶ್ನಿಸಿದರು.

ಬಿಜೆಪಿ ಜನಸಂಘರ್ಷ ಯಾತ್ರೆ ಉತ್ತರ ಕರ್ನಾಟಕಕ್ಕೆ ಬರಲಿ ಸ್ವಾಮಿ ಯಾರು ಬೇಡ ಅಂದೋರು ? ಜನರಲ್ಲಿ ಯಾವುದೇ ಆಕ್ರೋಶ ಇಲ್ಲವೇ ಇಲ್ಲ. ಈ ಹಿಂದೆಯೂ ಅವರು ವಕ್ಫ್ ರ‍್ಯಾಲಿ ಮಾಡಿದ್ರಲ್ಲ ಏನಾಯ್ತು ? ತೇಜಸ್ವಿ ಸೂರ್ಯ ಹೆಲ್ಪಲೈನ್ ತೆಗೆದಿದ್ದನಲ್ಲ , ಏನಾಯ್ತು ? ಯತ್ನಾಳ ಆಕ್ರೋಶ ಶಮನಕ್ಕೆ ಬರ್ತಿದಾರೆಯೇ ಹೊರತು ಜನರಲ್ಲಿ ಯಾವುದೇ ಆಕ್ರೋಶ ಇಲ್ಲ ಎಂದು ಬಿಜೆಪಿ ಯಾತ್ರೆ ಬಗ್ಗೆ ಲೇವಡಿ ಮಾಡಿದರು.

ಲಾರಿ ಮಾಲೀಕರೊಂದಿಗೆ ಮಾತುಕತೆ, ಸದ್ಯಕ್ಕಿಲ್ಲ ಕಠಿಣ ಕ್ರಮ

ಕಲಬುರಗಿ: ಲಾರಿ ಮುಷ್ಕರದ ಹಿನ್ನೆಲೆಯಲ್ಲಿ ಈಗಾಗಲೇ ಲಾರಿ ಮಾಲೀಕರೊಂದಿಗೆ ಮಾತುಕತೆ ನಡೆಸಿದ್ದೇವೆ. ಡೀಸೆಲ್ ದರ ಇಳಿಕೆ ಮತ್ತು ರಾಜ್ಯದಲ್ಲಿ ಟೋಲ್ ತೆಗೆಯಬೇಕು ಎನ್ನುವುದು ಅವರ ಪ್ರಮುಖ ಬೇಡಿಕೆಯಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗ ರೆಡ್ಡಿ ಹೇಳಿದ್ದಾರೆ

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಏವರು, ಟೋಲ್ ನಮ್ಮ ರಾಜ್ಯದಲ್ಲಿ ತೆಗೆದರೆ ಸಾಕಾ? ಕೇಂದ್ರ ಸರ್ಕಾರವೂ ಟೋಲ್ ಗಳನ್ನು ತೆಗೆಯಬೇಕಲ್ಲವಾ? ಇನ್ನು ಡಿಸೆಲ್ ದರ ಕೇಂದ್ರ ಸರ್ಕಾರ ನಿರಂತರವಾಗಿ ಹೆಚ್ಚಿಸುತ್ತಲೇ ಬಂದಿದೆ. ಆಗ ಎಲ್ಲಾ ಸುಮ್ಮನೆ ಇರುವ ಲಾರಿ ಮಾಲೀಕರು ಈಗ ಮುಷ್ಕರ ನಡೆಸುತ್ತಿರುವುದರ ಹಿನ್ನೆಲೆಯೇನು ? ನೀವೇ ಅರ್ಥ ಮಾಡಿಕೊಳ್ಳಿ ಎಂದರು.

ದಿನನಿತ್ಯ ಬಳಕೆಯ ವಸ್ತುಗಳ ಸಾಗಾಣಿಕೆಯ ಮೇಲೆ ಯಾವುದೇ ಪರಿಣಾಮ ಆಗಿಲ್ಲ. ಲಾರಿ ಮಾಲೀಕರ ಮೇಲೆ ನನಗೆ ವಿಶ್ವಾಸ ಇದೆ. ಅವರೊಂದಿಗೆ ಮತ್ತೊಮ್ಮೆ ಮಾತುಕತೆಯು ನಡೆಸುತ್ತೇವೆ. ಅವರು ಮುಷ್ಕರ ಹಿಂತೆಗೆದುಕೊಳ್ಳುತ್ತಾರೆ ಎನ್ನುವ ಭರವಸೆ ಇದೆ. ಕಠಿಣ ಕ್ರಮದ ಪ್ರಶ್ನೆ ಸದ್ಯಕ್ಕಿಲ್ಲ ಕಾಯ್ದು ನೋಡೋಣ ಎಂದು ಸಚಿವರು ಹೇಳಿದರು.

ಗೋರ್ಟಾದಲ್ಲಿ ಅದ್ದೂರಿ ವಚನ ವಿಜಯೋತ್ಸವ, ಭವ್ಯ ಮೆರವಣಿಗೆ

• **ಕನ್ನಡಪ್ರಭ ವಾರ್ತೆ** ಹುಲಸೂರು

ಲಿಂಗಾಯತ ಮಹಾ ಮಠದಿಂದ ಹುಲಸೂರು ತಾಲ್ಲೂಕಿನ ಗೋರ್ಟಾ (ಬಿ) ಗ್ರಾಮದಲ್ಲಿ ವಚನ ವಿಜಯೋತ್ಸವ ಹಾಗೂ ಅಕ್ಕ ಮಹಾದೇವಿ ಜಯಂತಿ ನಿಮಿತ್ತ ಇತ್ತೀಚೆಗೆ ಗುರು ವಚನ ಗ್ರಂಥದ ಭವ್ಯ ಮೆರವಣಿಗೆ ನಡೆಯಿತು.

ಅಲಂಕೃತ ವಾಹನದಲ್ಲಿ ಬಸವಣ್ಣ, ಅಕ್ಕ ಮಹಾದೇವಿ ಭಾವಚಿತ್ರ ಹಾಗೂ ಲಿಂಗಾಯತ ಧರ್ಮ ಗ್ರಂಥ ಇಡಲಾಗಿದ್ದರೆ, 770 ಅಮರಗಣಂಗಳ ಸಂಕೇತವಾಗಿ ಸಮವಸ್ತ್ರಧಾರಿ ಶರಣ-ಶರಣೆಯರು ತಲೆ ಮೇಲೆ ವಚನ ಗ್ರಂಥ ಹೊತ್ತು ಶಿಸ್ತಿನಿಂದ ಸಾಲಾಗಿ ಹೆಜ್ಜೆ ಹಾಕಿದರು. ವಚನ ವಿಜಯೋತ್ಸವ ಗೀತೆ, ಶರಣರ ವಚನಗಳನ್ನು ಹಾಡುತ್ತಾ ಸಾಗಿದರು. ವಚನ ವಡಪುಗಳು ಎಲ್ಲರಲ್ಲಿ ಭಕ್ತಿ ಭಾವ ಉಕ್ಕಿಸಿದವು. ಅವುಗಳಿಗೆ ಮೈ ಮರೆತ ಜನ ಓಂ ಬಸವ ಘೋಷಣೆ ಕೂಗಿದರು.ಪ್ರಭುದೇವ ಸ್ವಾಮೀಜಿ ಹಾಗೂ ಬಸವಪ್ರಭು ಸ್ವಾಮೀಜಿ ಮೆರವಣಿಗೆ ಮುಂಚೂಣಿಯಲ್ಲಿದ್ದರು. ಓಣಿ, ಓಣಿಗಳಲ್ಲಿ ಜನರು ನೀರು ಸುರಿದು ಅವರನ್ನು ಸ್ವಾಗತಿಸಿದರು. ಛತ್ರಿ, ಚಾಮರ, ಷಟ್ ಸ್ಥಳ ಧ್ವಜಗಳು ಮೆರವಣಿಗೆಯ ಮೆರುಗು ಹೆಚ್ಚಿಸಿದವು.

ಮುಖಂಡ ಅಣವೀರ ಕೊಡಂಬಲ್ ಷಟ್‌ಸ್ಥಲ ಧ್ವಜಾರೋಹಣಗೈದು ಮೆರವಣಿಗೆಗೆ ಚಾಲನೆ ನೀಡಿದರು.

ಒಂದೇ ತೆರನಾದ ಸೀರೆ ಧರಿಸಿದ್ದ ನೀಲಮ್ಮನ ಬಳಗದ 770 ಸಹೋದರಿಯರು ಏಕಕಾಲಕ್ಕೆ ಸಾಮೂಹಿಕವಾಗಿ ಅಕ್ಕನ ಯೋಗಾಂಗ ತ್ರಿವಿಧಿಯನ್ನು ಭಕ್ತಿ, ಶದ್ಧೆಯಿಂದ ಸುಶ್ರಾವ್ಯವಾಗಿ ಹಾಡಿ ಗಮನ ಸೆಳೆದರು.

ಬಿ.ಆರ್. ಪಾಟೀಲ್ ರೀತಿ ಸೌಂಡ್ ಮಾಡ್ತಿರಬೇಕ್ರಿ: ಮಲ್ಲಿಕಾರ್ಜುನ ಖರ್ಗೆ

• **ಕನ್ನಡಪ್ರಭ ವಾರ್ತೆ** ಕಲಬುರಗಿ

ಉದ್ಯೋಗ ಮೇಳ ಉದ್ಘಾಟನಾ ಸಮಾರಂಭದಲ್ಲಿ ಎಐಸಿಸಿ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಖರ್ಗೆ ಹಿರಿಯ ಶಾಸಕ ಬಿ. ಆರ್ ಪಾಟೀಲರ ಕಾಳೆದರು.

ಆಗಾಗ ಸೌಂಡ್ ಮಾಡ್ತಿರಬೇಕು, ಹಂಗ ಮಾಡದಿದ್ರೆ ಯಾರೂ ಕೇಳೋದಿಲ್ಲ ಎಂದು ಸೋದಾಹರಣವಾಗಿ ಹಲವು ವಿಷಯ ಪ್ರಸ್ತಾಪಿಸಿದ್ದ ಖರ್ಗೆ ಮಾತು ಮಾತಲ್ಲೇ ಪಕ್ಕದಲ್ಲೇ ಕುಳಿತ್ತಿದ್ದ ಬಿ.ಆರ್. ಪಾಟೀಲರತ್ತ ತಿರುಗಿ ನೋಡುತ್ತ, ಬಿಆರ್ ಪಾಟೀಲರು ನೋಡ್ರಿ, ಆಗಾಗ ಸೌಂಡ್ ಮಾಡ್ತಾನೆ ಇರ್ತಾನೆ, ಹೀಂಗಾಗಿ ಎಲ್ಲರ ಗಮನ ಸೆಳೆತಿರ್ತಾರ ಎಂದು ಮಾತಿನ ಚಟಾಕಿ ಹಾರಿಸಿದರು.

ಖರ್ಗೆಯವರ ಆ ಮಾತಿಗೆ ವೇದಿಕೆಯಲ್ಲಿದ್ದ ಸಿಎಂ, ಡಿಸಿಎಂ ಆದಿಯಾಗಿ ಎಲ್ಲರೂ ಹೊಟ್ಟೆ ಹುಣ್ಣಾಗುವಂತೆ ನಕ್ಕರು.ಸಚಿವಸ್ಥಾನದೊರಕಿಲ್ಲವೆಂಬಅಸಮಾಧಾನದಲ್ಲಿರುವ ಬಿ.ಆರ್. ಪಾಟೀಲರು ಲೇಟರ್ ಬರೆದು ಸಿಡಿದೆದ್ದಾಗ ಅವರಿಗೆ ಸಿಎಂ ಸಿದ್ದರಾಮಯ್ಯ ತಮ್ಮ ಸಲಹೆಗಾರರನ್ನಾಗಿ ನೇಮಿಸಿದ್ದರು. ಮತ್ತೆ ಅನುದಾನ ಹಂಚಿಕೆಯಲ್ಲಿನ ತಾರತಮ್ಯವಾಗಿ ಕೋಪಗೊಂಡಿದ್ದ ಬಿಆರ್ ಪಾಟೀಲರು ಮತ್ತೆ ಪತ್ರ ಬರೆದು ಬಾಂಬ್ ಸಿಡಿಸಿದ್ರು. ನಂತರ ತಾವು ಸಿಎಂ ಸಲಹೆಗಾರ ಹುದ್ದೆಗೂ ರಾಜೀನಾಮೆ ನೀಡುವ ಮೂಲಕ ಬಾರಿ ಸದ್ದು ಮಾಡಿದ್ದರು. ಇದಾದ ನಂತರ ಮತ್ತೆ ಸಿಎಂ ಸಿದ್ದರಾಮಯ್ಯನರವು ಬಿಆರ್ ಪಾಟೀಲರಿಗೆ ಯೋಜನಾ ಆಯೋಗದ ಉಪಾಧ್ಯಕ್ಷರ ಸ್ಥಾನಮಾನ ನೀಡಿದ್ದು ಇತಿಹಾಸ.

ಅಜಾನ್ ಕೇಳಿ ಬಂದಾಗ ಭಾಷಣ ನಿಲ್ಲಿಸಿದ ಖರ್ಗೆ

ಕಲಬುರಗಿ ಉದ್ಯೋಗ ಮೇಳ ಕಾರ್ಯಕ್ರಮದಲ್ಲಿ ರಾಜ್ಯಸಭಾ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಭಾಷಣ ಮಾಡುವಾಗ ಪಕ್ಕದ ಮಜೀದಿಯಿಂದ ಭಾಷಣದ ವೇಳೆ ಕೇಳಿ ಬಂದ ಅಜಾನ್ ಘೋಷಣೆಯ ಶಬ್ದ ಕೇಳಿಬಂತು. ಅಜಾನ್ ಕೇಳಿಸುತ್ತಿದ್ದಂತೆಯೇ ಹತ್ತು ನಿಮಿಷಗಳ ಕಾಲ ಭಾಷಣ ನಿಲ್ಲಿಸಿ ಮಲ್ಲಿಕಾರ್ಜುನ ಖರ್ಗೆ ಮೌನವಾಗಿ ನಿಂತರು. ಅಜಾನ್ ಮುಗಿಯು ತ್ತಿದ್ದಂತೆಯೇ ಆಯ್ತಾ ? ಎಂದು ಪ್ರಶ್ನಿಸಿ ಮಾತು ಮುಂದುವರೆಸಿದಾಗ ಸಭೆಯಲ್ಲಿ ಬಹು ಸಂಖ್ಯೆಯಲ್ಲಿ ಸೇರಿದ್ದ ಮುಸಲ್ಮಾನ ಬಾಂಧವರು ಜೋರಾಗಿ ಕರತಾಡನ ಮಾಡುವ ಮೂಲಕ ಖರ್ಗೆಯವರ ಈ ಕ್ರಮವನ್ನ ಮನಪೂರ್ವಕವಾಗಿ ಸ್ವಾಗತಿಸಿದರು.

ಕೋಮು ದ್ವೇಷ ಭಾಷಣ ಆರೋಪ: ಆಂದೋಲಾ ಶ್ರೀ ವಿರುದ್ಧ ಕೇಸ್

• **ಕನ್ನಡಪ್ರಭ ವಾರ್ತೆ** ಕಲಬುರಗಿ

ಕೋಮು ದ್ವೇಷ ಭಾಷಣ ಮತ್ತು ಕಾಂಗ್ರೆಸ್ ನಾಯಕರ ವಿರುದ್ಧ ಅವಹೇಳನಾಕಾರಿ ಹೇಳಿಕೆ ನೀಡಿರುವ ಆರೋಪದಲ್ಲಿ ಆಂದೋಲಾದ ಸಿದ್ಧಲಿಂಗ ಸ್ವಾಮೀಜಿ ವಿರುದ್ಧ ಚಿಂಚೋಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.15ರಂದು ಚಿಂಚೋಳಿ ತಾಲೂಕಿನ ಐನೊಳ್ಳಿ ಗ್ರಾಮದಲ್ಲಿ ಶ್ರೀ ರಾಮೋತ್ಸವ ಸಮಿತಿ ಆಯೋಜಿಸಿದ್ದ ಶ್ರೀ ರಾಮನವಮಿ ಉತ್ಸವದ ಕಾರ್ಯಕ್ರಮದಲ್ಲಿ ಆಂದೋಲಾ ಶ್ರೀ, ಹಿಂದೂ - ಮುಸ್ಲಿಮರ ಮಧ್ಯೆ ಕೋಮದ್ವೇಷದ ದ್ವೇಷ ಬಿತ್ತುವ ಭಾಷಣ ಮಾಡಿದ್ದಾರೆ. ಅಲ್ಲದೆ, ಸಿಎಂ ಸಿದ್ದರಾಮಯ್ಯ, ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವ ಶರಣ ಬಸಪ್ಪ ದರ್ಶನಪುರ್‌ವಿರುದ್ಧ ಅವಹೇಳನಕಾರಿ ಮಾತಾಡಿದ್ದಾರೆಂದು ಆರೋಪದಲ್ಲಿ ಕೇಸ್ ದಾಖಲಾಗಿದೆ. ಚಿಂಚೋಳಿ ಬ್ಲಾಕ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶರಣು ಪಾಟೀಲ್ ದೂರಿನ ಮೇರೆಗೆ ಚಿಂಚೋಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಳೆ ಬಿಜೆಪಿ ಜನಾಕ್ರೋಶ ಯಾತ್ರೆ

ಔರಾದ್:ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರ ನೇತೃತ್ವದಲ್ಲಿ ಏ.18ರಂದು ಸಂಜೆ ಬೀದರನಲ್ಲಿ ನಡೆಯಲಿರುವ ಜನಾಕ್ರೋಶ ಯಾತ್ರೆಯಲ್ಲಿ ಹೆಚ್ಚಿನ ಜನ ಭಾಗವಹಿಸಬೇಕೆಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ತಿಳಿಸಿದ್ದಾರೆ.

ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರವು ಸಾಕಷ್ಟು ಜನವಿರೋಧಿ ನಿಲುವುಗಳನ್ನು ತೆಗೆದುಕೊಳ್ಳುತ್ತಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಹಣ ದುರ್ಬಳಕೆ, ಮುಸ್ಲಿಂ ಸಮಾಜದ ಓಲೈಕೆ, ಹಿಂದೂ ವಿರೋಧಿ ನೀತಿ, ಗ್ಯಾರಂಟಿ ಹೆಸರಿನಲ್ಲಿ ಜನತೆಗೆ ಮಾಡುತ್ತಿರುವ ಅನ್ಯಾಯದಂತಹ ಜನವಿರೋಧಿ ನಿಲುವುಗಳ ವಿರುದ್ಧ ಬಿಜೆಪಿಯಿಂದ ರಾಜ್ಯಾದ್ಯಂತ ಜನಾಕ್ರೋಶ ಯಾತ್ರೆ ನಡೆಸಲಾಗುತ್ತಿದೆ. ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರೊಂದಿಗೆ' ಆರ್.ಅಶೋಕ,ಛಲವಾದಿನಾರಾಯಣಸ್ವಾಮಿ, ಶ್ರೀರಾಮುಲು ಆಗಮಿಸಲಿದಾರೆ. ಬೀದರ್‌ನ ಗಣೇಶ ಮೈದಾನದಿಂದ ಪ್ರಮುಖ ರಸ್ತೆಗಳ ಮೂಲಕ ಶಿವಾಜಿ ಮಹಾರಾಜರ ವೃತ್ತದ ವರೆಗೆ ಬೃಹತ್ ಪ್ರತಿಭಟನಾ ರ್ಯಾ ಲಿ ನಡೆಸಿ ನಂತರ ಬಹಿರಂಗ ಸಮಾವೇಶ ಏರ್ಪಡಿಸಲಾಗಿದೆ.

ಬೂತ್ ಅಧ್ಯಕ್ಷರು, ಮಹಾಶಕ್ತಿ ಕೇಂದ್ರ, ಶಕ್ತಿ ಕೇಂದ್ರ ಪದಾಧಿಕಾರಿಗಳು, ವಿವಿಧ ಮೋರ್ಚಾಗಳ ಪ್ರಮುಖರು, ಪಕ್ಷದ ಎಲ್ಲ ಪದಾಧಿಕಾರಿಗಳು, ಕಾರ್ಯಕರ್ತರು, ರೈತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಜನಾಕ್ರೋಶ ಯಾತ್ರೆಯನ್ನು ಯಶಸ್ವಿಗೊಳಿಸಬೇಕೆಂದು ಕೋರಿದ್ದಾರೆ.

ಸ್ವಾಧೀನ ಸೂಚನೆ

ಆದಾಗ್ಯೂ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ (ಹಿಂದೆ ಜನಲಕ್ಷ್ಮಿ ಫೈನಾನ್ಷಿಯಲ್ ಸರ್ವಿಸ್ ಲಿಮಿಟೆಡ್ ಎಂಬುದಾಗಿತ್ತು) ಅಧಿಕೃತ ಅಧಿಕಾರಿಯಾಗಿ, 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ ಕಲಂ 13(2)ರ ಜೊತೆಗೆ ಓದಿಕೊಳ್ಳಬೇಕಾದ 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮ 3ರಂತೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕೆಳಕಂಡ ಸಾಲಗಾರ(ರು)/ಸಹ-ಸಾಲಗಾರ(ರು)ಗಳಿಗೆ **ಡಿಮಾಂಡ್ ನೋಟೀಸ್**ಗಳನ್ನು ಜಾರಿಮಾಡಿ ಅವರ ಹೆಸರುಗಳಿಗೆ ಎದುರಾಗಿ ಕೆಳಕಂಡಂತೆ ನಮೂದಿಸಲಾದ ಅಸಲು + ಅನ್ವಯಿಸುವ ದರದಂತೆ ಬಡ್ಡಿ ಸೇರಿದ ಬಾಕಿ ಮೊಬಲಗನ್ನು ಸದರಿ ನೋಟೀಸು ಸ್ವೀಕರಿಸಿದ ದಿನಾಂಕದಿಂದ ಜೊತೆಗೆ ಪಾವತಿಯಾಗುವ ದಿನಾಂಕದವರೆಗೆ ಮತ್ತು/ಅಥವಾ ಪೂರ್ತಿ ತೀರುವ ದಿನಾಂಕದವರೆಗೆ ತದನಂತರದ ಬಡ್ಡಿ, ಸಾಂದರ್ಭಿಕ ವೆಚ್ಚಗಳು, ಕಾಸ್ಟ್‌ಗಳು ಚಾರ್ಜು ಇತ್ಯಾದಿಗಳು ಸೇರಿದ ಮೊತ್ತವನ್ನು **60** ದಿನದೊಳಗೆ ಪಾವತಿ ಮಾಡಲು ಒತ್ತಾಯಿಸಿದ್ದರು.

ಕ್ರ. ಸಂ	ಸಾಲದ ಸಂಖ್ಯೆ	ಸಾಲಗಾರ/ಸಹ-ಸಾಲಗಾರ/ ಜಾಮೀನುದಾರ/ಅಡಮಾನದಾರ	13(2)ರ ನೋಟೀಸ್ ದಿನಾಂಕ/ ಬಾಕಿ ಮೊತ್ತ (ರೂ.) ದಿನಾಂಕದಂದು ಇದ್ದಂತೆ	ಸ್ವಾಧೀನದ ದಿನಾಂಕ/ಸಮಯ ಮತ್ತು ವಿಧ
1	31760430000281	1) ಶ್ರೀ ಸಂತೋಷ್ ಅಲ್ಲದೇ: ಮೆ|| ಮಾಣಿಕಗಿರಿ ಕನ್‌ಸ್ಟ್ರಕ್ಷನ್ ಅಂಡ್ ಬಿಲ್ಡರ್ಸ್ ಮತ್ತು 2) ಶ್ರೀಮತಿ ಚಂದ್ರಮ್ಮ	05.12.2024, ರೂ. 5,18,813.27/- (ಐದು ಲಕ್ಷದ ಹದಿನೆಂಟು ಸಾವಿರದ ಎಂಟುನೂರ ಹದಿಮೂರು ರೂ. ಮತ್ತು ಇಪ್ಪತ್ತೇಳು ಪೈಸೆ ಮಾತ್ರ) ಬಾಕಿ 02-12-2024ರಂದು ಇದ್ದಂತೆ	Date:15-04-2025 Time:03:33 PM ಸಾಂಕೇತಿಕ ಸ್ವಾಧೀನತೆ
	ಆಸ್ತಿಯ ವಿವರಣೆ : ಸಕಲ ಸಮಸ್ತವೂ ಸೇರಿದಂತೆ ಸ್ಥಿರಾಸ್ತಿಯ ಮಾಲೀಕತ್ವ ಮತ್ತು ಸ್ವಾಧೀನತೆ ಹೊಂದಿರುವ ವಸತಿ ಆಸ್ತಿಯ ಡಿಸಿಬಿ ಸಂ. 371, ಇ-ಸ್ವತ್ತಿನ ಸಂ.150600400700220310ರ ಅಳತೆ ಪೂರ್ವ-ಪಶ್ಚಿಮ ಅಳತೆ: 12 ಮೀಗಳು ಮತ್ತು ಉತ್ತರ-ದಕ್ಷಿಣ: 9 ಮೀ.ಗಳು 90.00 ಚದರ ಮೀ.ಗಳು ಒಳಗೊಂಡಂತೆ ಒಟ್ಟು ಅಳತೆ: 108.00 ಚ.ಮೀ.ಗಳು ಕೋಲಾರ (ಕರ್ನಾಟಕ) ಬೀದರ್ ಜಿಲ್ಲೆಯ ಬ್ಯಾಕೌಡಿ ಗ್ರಾಮ ಪಂಚಾಯತ್‌ನಲ್ಲಿದೆ. ಈ ಕೆಳಗಿನ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಪಂಡಿತ್‌ರವರ ಮನೆ, ದಕ್ಷಿಣಕ್ಕೆ: ಲಾಲ್ಪಾರವರ ಮನೆ.			
2	31769630000895 & 31769410000833	1) ಶ್ರೀ ಖಾದೀರ್ ಸಾಬ್, 2) ಶ್ರೀಮತಿ ಜೈನಾ ಬೀ 3) ಶ್ರೀ ತಾಜೋದ್ದೀನ್	18.01.2025; ರೂ.6,86,922.63/- (ಆರು ಲಕ್ಷದ ಎಂಭತ್ತಾರು ಸಾವಿರದ ಒಂಬೈನೂರ ಇಪ್ಪತ್ತೆರಡು ರೂ. ಮತ್ತು ಅರವತ್ತಮೂರು ಪೈಸೆ ಮಾತ್ರ)	Date: 15-04-2025 Time: 12:40 PM ಸಾಂಕೇತಿಕ ಸ್ವಾಧೀನತೆ
	ಆಸ್ತಿಯ ವಿವರಣೆ : ಸಕಲ ಸಮಸ್ತವೂ ಸೇರಿದಂತೆ ಸ್ಥಿರಾಸ್ತಿಯ ಮಾಲೀಕತ್ವ ಮತ್ತು ಸ್ವಾಧೀನತೆ ಹೊಂದಿರುವ ವಸತಿ ಆಸ್ತಿಯ ಜಿ.ಪಿ. ಸಂ: 150600402900400132. ಅಳತೆ ಪೂರ್ವ-ಪಶ್ಚಿಮಕ್ಕೆ 18.288 ಮತ್ತು ಉತ್ತರ-ದಕ್ಷಿಣ: 12.192 ಒಟ್ಟು ವಿಸ್ತೀರ್ಣ 222.97 ಚ.ಮೀ.ಗಳು, ಜಿಪಿ: ಅಸ್ಟೂರ್ ಗುಮ್ಮ ಬೀದರ್, ತಾ- ಬೀದರ್ ಮತ್ತು ಬೀದರ್ ಜಿಲ್ಲೆ, ಚಕ್ಕುಬಂದಿ: ಪೂರ್ವಕ್ಕೆ: ಜೈದಾ ಬೇಗಂರವರ ಮನೆ, ಪಶ್ಚಿಮಕ್ಕೆ: ಮಾಣಿಕ್‌ರವರ ಮನೆ, ಉತ್ತರಕ್ಕೆ: 20 ಅಡಿ ಅಗಲದ ರಸ್ತೆ, ದಕ್ಷಿಣಕ್ಕೆ: ನಾಗಪ್ಪರವರ ಮನೆ.			
3	31760430000430	1) ಶ್ರೀ ತಿಪ್ಪಣ್ಣ ಎ ಮತ್ತು 2) ಶ್ರೀಮತಿ ಸಾಕ್ಷಿ	18-01-2025; ರೂ.5,17,067.85/- (ಐದು ಲಕ್ಷದ ಹದಿನೇಳು ಸಾವಿರದ ಅರವತ್ತೇಳು ರೂ. ಮತ್ತು ಎಂಭತ್ತೈದು ಪೈಸೆ ಮಾತ್ರ) ಬಾಕಿ 16-01-2025 ರಂದು ಇದ್ದಂತೆ	Date: 15-04-2025 Time: 01:26 PM ಸಾಂಕೇತಿಕ ಸ್ವಾಧೀನತೆ
	ಆಸ್ತಿಯ ವಿವರಣೆ : ಸಕಲ ಸಮಸ್ತವೂ ಸೇರಿದಂತೆ ಸ್ಥಿರಾಸ್ತಿಯ ಮಾಲೀಕತ್ವ ಮತ್ತು ಸ್ವಾಧೀನತೆ ಹೊಂದಿರುವ ವಸತಿ ಆಸ್ತಿಯ ಸಿಎಂಸಿ ಸಂ.14-10-189/6, ಅಳತೆ ಪೂರ್ವ-ಪಶ್ಚಿಮಕ್ಕೆ: 15.24 ಚ.ಮೀ.ಗಳು ಮತ್ತು ಉತ್ತರ-ದಕ್ಷಿಣಕ್ಕೆ: 21.336 ಚ.ಮೀ.ಗಳು ಒಟ್ಟು ಅಳತೆ:325.16 ಚ.ಮೀ.ಗಳು ಬೀದರ್ (ಕರ್ನಾಟಕ)ನ ಹಳ್ಳಡ್ಕೇರಿ ಕೆನನ್ ಕಾಲೋನಿಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಸುರೇಶ್ ಹಿಪ್ಪಲಗಾಂವ್‌ರವರ ಮನೆ, ಪಶ್ಚಿಮಕ್ಕೆ: ರಾಜು ಟೈಲರ್‌ರವರ ಮನೆ, ಉತ್ತರಕ್ಕೆ: 20 ಅಡಿ ರಸ್ತೆ, ದಕ್ಷಿಣಕ್ಕೆ: 20 ಅಡಿ ರಸ್ತೆ.			
4	31769440000170 & 31769410000671	1) ಶ್ರೀಮತಿ ಶಿಲ್ಪಾ ಪಾಂಚಾಲ್ (ಜಾಮೀನುದಾರರು ಮತ್ತು ಕಾನೂನುಬದ್ಧ ಉತ್ತರಾಧಿಕಾರಿಗಳು ಸಾಲಗಾರ ಮೃತ ಪ್ರಭಾಕರ್ ಮಾಲೀಕರು- ಶ್ರೀ ಭಾಗ್ಯವಂತಿ ಮಠದ ಪೀಠೋಪಕರಣ)	16-01-2025, ರೂ. 7,18,398.90 (ಏಳು ಲಕ್ಷದ ಹದಿನೆಂಟು ಸಾವಿರದ ಮುನ್ನೂರ ತೊಂಭತ್ತೆಂಟು ರೂ. ಮತ್ತು ತೊಂಭತ್ತು ಪೈಸೆ ಮಾತ್ರ) ಬಾಕಿ 12-01-2025 ರಂದು ಇದ್ದಂತೆ	Date: 15-04-2025 Time: 01:58 PM ಸಾಂಕೇತಿಕ ಸ್ವಾಧೀನತೆ
	ಆಸ್ತಿಯ ವಿವರಣೆ : ಸಕಲ ಸಮಸ್ತವೂ ಸೇರಿದಂತೆ ಸ್ಥಿರಾಸ್ತಿಯ ಮಾಲೀಕತ್ವ ಮತ್ತು ಸ್ವಾಧೀನತೆ ಹೊಂದಿರುವ ವಸತಿ ಆಸ್ತಿಯ ಖಾಲಿ ಜಾಗದ ಮುನಿಸಿಪಲ್ ಸಂ.17-5-416/1 ಅಳತೆ ಪೂರ್ವದಿಂದ ಪಶ್ಚಿಮಕ್ಕೆ 60 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 30 ಅಡಿ , 1800 ಚದರ ಅಡಿ ವಿಸ್ತೀರ್ಣಕ್ಕೆ ಸಮನಾಗಿರುತ್ತದೆ, ಇದು ಬೀದರ್‌ನ ಮೈಲೂರಿನ ಸಿಂದೋಲ್ ಕಲ್ಯಾಣ ಮಂಟಪದ ಪಕ್ಕದಲ್ಲಿದೆ, ಇದರ ಚಕ್ಕುಬಂದಿ: ಪೂರ್ವಕ್ಕೆ: 20 ಅಡಿ ಅಗಲದ ರಸ್ತೆ, ಪಶ್ಚಿಮಕ್ಕೆ: ಮಾರಾಟಗಾರರ ಉಳಿಕೆ ಭಾಗ, ಉತ್ತರಕ್ಕೆ: ಇತರ ಖಾಲಿ ಜಾಗ, ದಕ್ಷಿಣಕ್ಕೆ: ಇತರ ಖಾಲಿ ಜಾಗ			

ಆದಾಗ್ಯೂ, ಮೇಲೆ ತಿಳಿಸಿದ ಸಾಲಗಾರ(ರು) /ಸಹ-ಸಾಲಗಾರ(ರು) /ಜಾಮೀನುದಾರ(ರು)/ಅಡಮಾನದಾರ (ರು) ಬಾಕಿ ಮೊತ್ತವನ್ನು ಪಾವತಿ ಮಾಡುವಲ್ಲಿ ವಿಫಲರಾಗಿದ್ದು, ಈ ಮೂಲಕ ಮೇಲೆ ತಿಳಿಸಿದ ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ತಿಳಿಯಪಡಿಸುವುದೇನೆಂದರೇ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಸದರಿ ಕಾಯಿದೆಯ ಕಲಂ 13(4) ಮತ್ತು ಜೊತೆಗೆ ಓದಿಕೊಳ್ಳಬೇಕಾದ ನಿಯಮಗಳ ನಿಯಮ 8ರಂತೆ ಪ್ರದತ್ತವಾದ ಅಧಿಕಾರಗಳಂತೆ ಮೇಲೆ ತಿಳಿಸಿದ ಆಸ್ತಿಯನ್ನು / ಭದ್ರತಾ ಸ್ವತ್ತುಗಳನ್ನು ಮೇಲೆ ತಿಳಿಸಿದ ದಿನಾಂಕದಂದು **ಸಾಂಕೇತಿಕ ಸ್ವಾಧೀನತೆಗೆ ಪಡೆದುಕೊಂಡಿರುತ್ತಾರೆ.** ಮೇಲೆ ತಿಳಿಸಿದ ಸಾಲಗಾರ(ರು)/ ಸಹ-ಸಾಲಗಾರರು/ ಜಾಮೀನುದಾರರು/ ಅಡಮಾನದಾರರಿಗೆ ನಿರ್ದಿಷ್ಟವಾಗಿ ಹಾಗೂ ಸಾರ್ವಜನಿಕರಿಗೆ ವಿಸ್ತಾರವಾಗಿ ನೀಡುವ ಎಚ್ಚರಿಕೆಯೇನೆಂದರೇ, ಮೇಲೆ ತಿಳಿಸಿದ ಆಸ್ತಿಗಳ/ ಭದ್ರತಾ ಸ್ವತ್ತುಗಳ ಬಗ್ಗೆ ಯಾರೂ ಯಾವುದೇ ರೀತಿಯಲ್ಲಿ ವ್ಯವಹರಿಸಬಾರದು, ಆದಾಗ್ಯೂ ವ್ಯವಹರಿಸಿದ್ದೇ ಆದರೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ಗೆ ಬಾಕಿಯಾಗಿರುವ ಮೊತ್ತಕ್ಕೆ ಬಾಧ್ಯರಾಗಬೇಕಾಗುತ್ತದೆ.

ಸ್ಥಳ : ಕರ್ನಾಟಕ
ದಿನಾಂಕ : 17.04.2025

ಸಹಿ/- ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಪರವಾಗಿ

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

PUBLIC NOTICE

By this public notice to one and all in general and particularly concerned in any manner to the following land;

The property **Land Sy. No. 12/*/2 measuring 13 -acres 34 -guntas, (Including 02 gunta A Kharab and 05 Gunta B Kharab) R.A. of Rs. 32.14 Paise, Khata No. 5247 situated at village Nagankera Tq Chitguppa Dist: Bidar,** belonging to **Sri. BATTULA SRINIVASA REDDY S/o GOPI REDDY** R/o H.No. 204, Gama Block, Jayabheri Silion Colony, Near Google Office, Kondapur Kothaguda, Serilingampally K. V Rangareddy, TS-500084 **Aadhar No. 8649 3717 1015**. he is the owner and possessor of said land, I do hereby inform that my client **Sri. HARDIK JAIN S/o SUSHIL KUMAR JAIN** R/o K1502, Aparna Sarovar Zenith, Kanchi Gachibowli Road, Nallagandla Main Road, Serilingampally, Dist. K. V. Rangareddy-500046 is intended to purchase the above said property for valued consideration from the above said owner as mentioned above, if person or persons, public at large, Govt body, Semi Govt. Financial Institutions, Bank authority, or anybody etc, have got any claim, right title or interest or any objection for purchase of the same by my client the same be pleased to inform me in writing with their documents specific objection and claim for the same within a period of 15 days from the date of publication of the this notice and if no claim and objection is received by me within that period then I will direct my client to complete the purchase transaction and get the sale deed executed from the owner said property as mentioned above and their after no claim of any kind and of any nature will be considered my client which may please note.

Hence this public notice.

Sd/- **Kirankumar S. Hanamshetty**
Advocate, Humnabad,
Tq: Humnabad, Dist: Bidar.
Cell No. 9986245162

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಚಿತ್ತಾಪೂರ

ಅಪರಾಧ ಸಂಕೀರ್ಣ ಸಂಖ್ಯೆ: 1025/2025

ಈರಪ್ಪ ತಂದೆ ದಿ. ಅಯಪ್ಪ ಪೂಜಾರಿ, ವಯಸ್ಸು: 42 ವರ್ಷಗಳು, ಉದ್ಯೋಗ: ಒಕ್ಕಲುತನ, ಸಾ: ಕುಲಕುಂದಾ ಗ್ರಾಮ, ತಾ: ಚಿತ್ತಾಪೂರ, ಜಿ: ಕಲಬುರಗಿ.

...**ಅರ್ಜಿದಾರರು**

ವಿರುದ್ಧ

1. ಜನನ ಮತ್ತು ಮರಣ ನೊಂದಣಾಧಿಕಾರಿಗಳು ಹಾಗೂ ತಹಸೀಲ್ದಾರರು ತಹಶೀಲ್ ಕಾರ್ಯಾಲಯ, ಚಿತ್ತಾಪೂರ, ತಾ: ಚಿತ್ತಾಪೂರ, ಜಿ: ಕಲಬುರಗಿ.
2. All Concerned ...**ಎದುರುದಾರರು**

ಜನನ ಮತ್ತು ಮರಣ ನೊಂದಣಿ ಅಧಿನಿಯಮ, 1969 ಕಲಂ 13(3) ರಡಿಯಲ್ಲಿ ಅರ್ಜಿದಾರರ ಪರ ಅರ್ಜಿ.

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರನ **ಅಜ್ಜಿಯಾದ ದಿ. ಬಸಲಿಂಗಮ್ಮ ಗಂಡ ದಿ. ಮಳಗ್ಯಾ ಹರಿಜನ, ರವರು ಕಲಬುರಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಕುಲಕುಂದಾ ಗ್ರಾಮದಲ್ಲಿ** ದಿನಾಂಕ: 12-08-1982 ರಂದು ತಮ್ಮ ಸ್ವಂತ ನಿವಾಸದಲ್ಲಿ ಮರಣ ಹೊಂದಿರುತ್ತಾಳೆ. ಮರಣ ಪ್ರಮಾಣ ಪತ್ರ ನೀಡಿಕೆ-ಯ ಕೋರಿ, ಪ್ರತಿವಾದಿಗೆ ನಿರ್ದೇಶನ ನೀಡುವಂತೆ ಅರ್ಜಿದಾರನು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾನೆ. ಕಾರಣ ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟವರು ಸದರಿ ಅರ್ಜಿಯನ್ನು ಮಾನ್ಯ ಮಾಡಲು ಏನಾದರೂ ತಕರಾರು ಇದ್ದರೆ **ದಿನಾಂಕ : 02-06-2025 ರಂದು ಬೆಳಗ್ಗೆ 11-00 ಗಂಟೆಗೆ** ಖುದ್ದಾಗಿ ಅಥವಾ ನ್ಯಾಯವಾದಿಗಳ ಮುಖಾಂತರ ಈ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಲು ಈ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದೆ. ಸದರಿ ದಿನದಂದು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗದಿದ್ದಲ್ಲಿ, ಸದರಿ ಅರ್ಜಿಗೆ ತಮ್ಮ ಆಕ್ಷೇಪಣೆ ಇರುವುದಿಲ್ಲವೆಂದು ಪರಿಗಣಿಸಿ ಮುಂದಿನ ಆದೇಶ ಹೊರಡಿಸಲಾಗುತ್ತದೆ.

2025 ವರ್ಷದ ಏಪ್ರಿಲ್ ತಿಂಗಳ 16ನೇ ದಿನಾಂಕದಂದು ನನ್ನ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶ ಪ್ರಕಾರ
ಸಹಿ/- **ಮುಖ್ಯ ಲಿಪಿಕಾಧಿಕಾರಿ,**
ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ.
ಇವರ ಮುಖಾಂತರ,
ಸಹಿ/- **ಶ್ರೀ ಡಿ.ಸಿ. ಕುಲಕುಂದಿಕರ್**
ನ್ಯಾಯವಾದಿಗಳು, ಶಾಹಬಾದ.

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಚಿತ್ತಾಪೂರ

ಅಪರಾಧ ಸಂಕೀರ್ಣ ಸಂಖ್ಯೆ: 1026/2025

ಈರಪ್ಪ ತಂದೆ ದಿ. ಅಯಪ್ಪ ಪೂಜಾರಿ, ವಯಸ್ಸು: 42 ವರ್ಷಗಳು, ಉದ್ಯೋಗ: ಒಕ್ಕಲುತನ, ಸಾ: ಕುಲಕುಂದಾ ಗ್ರಾಮ, ತಾ: ಚಿತ್ತಾಪೂರ, ಜಿ: ಕಲಬುರಗಿ.

...**ಅರ್ಜಿದಾರರು**

ವಿರುದ್ಧ

1. ಜನನ ಮತ್ತು ಮರಣ ನೊಂದಣಾಧಿಕಾರಿಗಳು ಹಾಗೂ ತಹಸೀಲ್ದಾರರು ತಹಶೀಲ್ ಕಾರ್ಯಾಲಯ, ಚಿತ್ತಾಪೂರ, ತಾ: ಚಿತ್ತಾಪೂರ, ಜಿ: ಕಲಬುರಗಿ
2. All Concerned ...**ಎದುರುದಾರರು**

ಜನನ ಮತ್ತು ಮರಣ ನೊಂದಣಿ ಅಧಿನಿಯಮ, 1969 ಕಲಂ 13(3) ರಡಿಯಲ್ಲಿ ಅರ್ಜಿದಾರರ ಪರ ಅರ್ಜಿ.

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರನ **ಅಜ್ಜನಾದ ದಿ. ಮಳಗ್ಯಾ ತಂದೆ ದಿ. ಮರಿಗ್ಯಾ ಹರಿಜನ, ರವರು ಕಲಬುರಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಕುಲಕುಂದಾ ಗ್ರಾಮದಲ್ಲಿ** ದಿನಾಂಕ: 15-08-1980 ರಂದು ತಮ್ಮ ಸ್ವಂತ ನಿವಾಸದಲ್ಲಿ ಮರಣ ಹೊಂದಿರುತ್ತಾನೆ. ಮರಣ ಪ್ರಮಾಣ ಪತ್ರ ನೀಡಿಕೆಯ ಕೋರಿ, ಪ್ರತಿವಾದಿಗೆ ನಿರ್ದೇಶನ ನೀಡುವಂತೆ ಅರ್ಜಿದಾರನು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾನೆ. ಕಾರಣ ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟವರು ಸದರಿ ಅರ್ಜಿಯನ್ನು ಮಾನ್ಯ ಮಾಡಲು ಏನಾದರೂ ತಕರಾರು ಇದ್ದರೆ **ದಿನಾಂಕ : 02-06-2025 ರಂದು ಬೆಳಗ್ಗೆ 11-00 ಗಂಟೆಗೆ** ಖುದ್ದಾಗಿ ಅಥವಾ ನ್ಯಾಯವಾದಿಗಳ ಮುಖಾಂತರ ಈ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಲು ಈ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದೆ. ಸದರಿ ದಿನದಂದು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗದಿದ್ದಲ್ಲಿ, ಸದರಿ ಅರ್ಜಿಗೆ ತಮ್ಮ ಆಕ್ಷೇಪಣೆ ಇರುವುದಿಲ್ಲವೆಂದು ಪರಿಗಣಿಸಿ ಮುಂದಿನ ಆದೇಶ ಹೊರಡಿಸಲಾಗುತ್ತದೆ.

2025 ವರ್ಷದ ಏಪ್ರಿಲ್ ತಿಂಗಳ 16ನೇ ದಿನಾಂಕದಂದು ನನ್ನ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶ ಪ್ರಕಾರ
ಸಹಿ/- **ಮುಖ್ಯ ಲಿಪಿಕಾಧಿಕಾರಿ,**
ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ.
ಇವರ ಮುಖಾಂತರ,
ಸಹಿ/- **ಶ್ರೀ ಡಿ.ಸಿ. ಕುಲಕುಂದಿಕರ್**
ನ್ಯಾಯವಾದಿಗಳು, ಶಾಹಬಾದ.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
(ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

ಇ-ಹರಾಜು ಸೂಚನೆ

2002ರ ಭದ್ರತಾ ಹಿತಾಸಕ್ತಿ ನಿಯಮಗಳ ಪ್ರಾವಿಸೋ ರೂಲ್ 8(6) ಮತ್ತು 9 ರೊಂದಿಗೆ ಓದಿಕೊಳ್ಳಬೇಕಾದ ಸೆಕ್ಯುರೈಟೆಜೇಷನ್ ಅಂಡ್ ರೀಕನ್ಸಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಸರ್ಫೇಸಿ ಕಾಯಿದೆ), 2002 ರಡಿ ಆಸ್ತಿಗಳ ಇ-ಹರಾಜು ಮಾರಾಟಕ್ಕಾಗಿ ಸಾರ್ವಜನಿಕ ಸೂಚನೆ

ಆದಾಗ್ಯೂ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಸರ್ಫೇಸಿ ಕಾಯಿದೆಯ ಕಲಂ 13(4)ರಡಿ ಕೆಳಕಂಡ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಮಾಹಿತಿ ನೀಡುವುದೇನೆಂದರೆ ಸಾಲ ಪಡೆಯಲು ಸಾಲಗಾರರು ಅಡಮಾನ ಮಾಡಿರುವ ಆಸ್ತಿಗಳನ್ನು ಬ್ಯಾಂಕಿಗೆ ಬಾಕಿಯಾಗಿರುವ ಸಾಲಗಳ ವಸೂಲಾತಿಗಾಗಿ ''ಎಲ್ಲಿ ಹೇಗಿದೆಯೋ ಹಾಗೆಯೇ'' ಹಾಗೂ ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಆನ್‌ಲೈನ್ ಹರಾಜು (ಇ-ಹರಾಜು) ಮೂಲಕ ಸರ್ಫೇಸಿ ಕಾಯಿದೆಯಂತೆ ಇ-ಹರಾಜು ಮಾರಾಟ ಮಾಡಲಾಗುತ್ತದೆ.

ಕ್ರ. ಸಂ.	ಸಾಲದ ಖಾತಾ ಸಂಖ್ಯೆ	ಮೂಲ ಸಾಲಗಾರ/ ಸಹ-ಸಾಲಗಾರ/ ಜಾಮೀನುದಾರ/ಹೆಸರು	13-2 ನೋಟೀಸ್ ದಿನಾಂಕ	ಸ್ವಾಧೀನತೆಯ ದಿನಾಂಕ	ಪ್ರಸ್ತುತ ಬಾಕಿ ಮೊತ್ತ ದಿನಾಂಕ 15.04.2025 ರಂದು ಇದ್ದಂತೆ	ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ	ಮೀಸಲು ಬೆಲೆ ಐಎನ್‌ಆರ್	ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಂಡಿ) ಐಎನ್‌ಆರ್	ಇ-ಹರಾಜಿನ ದಿನಾಂಕ ಮತ್ತು ಸಮಯ	ಬಿಡ್ ಸಲ್ಲಿಸಲು ಸ್ಥಳ ಮತ್ತು ಕೊನೆಯ ದಿನಾಂಕ ಮತ್ತು ಸಮಯ
1	45459410001098 & 45459630000971	1) ಶ್ರೀ ನಂದ್‌ಕಿಶೋರ್ 2) ಶ್ರೀಮತಿ ಅಂಬೂ ಬಾಯ್ 3) ಶ್ರೀ ಪೃಥ್ವಿರಾಜ್	09.08.2024	29.03.2025	ರೂ. 9,03,923.18 (ಒಂಭತ್ತು ಲಕ್ಷದ ಮೂರು ಸಾವಿರದ ಒಂಭೈನೂರ ಇಪ್ಪತ್ತಮೂರು ರೂ. ಮತ್ತು ಹದಿನೆಂಟು ಪೈ. ಮಾತ್ರ)	07.05.2025 Time: 09:30 AM to 05:00 PM	ರೂ. 9,00,000/- (ಒಂಭತ್ತು ಲಕ್ಷ ರೂ. ಗಳು ಮಾತ್ರ)	ರೂ. 90,000/- (ತೊಂಭತ್ತು ಸಾವಿರ ರೂ. ಗಳು ಮಾತ್ರ)	21.05.2025 @ 02:00 PM	20.05.2025, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಮುಖ್ಯ ಕಛೇರಿ: ದಿ ಫೇರ್‌ವೇ, ನೆಲಮಹಡಿ ಮತ್ತು ಮೊದನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು- 560071.
	ಭದ್ರತಾ ಆಸ್ತಿಯ ವಿವರಣೆ : ಕೃಷಿಯೇತರ ವಸತಿ ಮನೆಯ ಕಾರ್ಪೋರೇಷನ್ ಸಂ. 8-1544/143/33/1, ಅಳತೆ: 1200 ಚದರ ಅಡಿ, 100 ಚ.ಅ. ಪ್ಲಿಂತ್ ಪ್ರದೇಶ ಹೊಂದಿದ್ದು, ತಾಜ್ ಸುಲ್ತಾಪುರ್ ತಾಲ್ಲೂಕು ಮತ್ತು ಜಿಲ್ಲೆ ಕಲಬುರ್ಗಿ. ಇದರ ಚಕ್ಕುಬಂದಿ ಈ ರೀತಿ ಇದೆ: ಪೂರ್ವಕ್ಕೆ: ಪ್ಲಾಟ್ ಸಂ. 40, ಪಶ್ಚಿಮಕ್ಕೆ: 20' ಅಡಿ ಅಗಲ ರಸ್ತೆ, ಉತ್ತರಕ್ಕೆ: ಪ್ಲಾಟ್ ಸಂ. 32, ದಕ್ಷಿಣಕ್ಕೆ: ಪ್ಲಾಟ್ ಸಂ. 34.									

ಆಸ್ತಿಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಮಾರಾಟ ಮಾಡಲಾಗುವುದು. ಇ-ಹರಾಜನ್ನು 'ಆನ್ ಲೈನ್' ಮೂಲಕ ನಡೆಸಲಾಗುತ್ತದೆ. ಹರಾಜನ್ನು ಬ್ಯಾಂಕ್ ಅಂಗೀಕೃತ ಸೇವಾ ಒದಗಿಸುವವರಾದ ಮೆ||-4 ಕ್ಲೋಸರ್ ಮೂಲಕ **https://bankauctions.in & www.foreclosureindia.com.** ಎಂಬುವ ವೆಬ್‌ಪೋರ್ಟಲ್‌ನಲ್ಲಿ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮತ್ತು ವಿವರಗಳಿಗಾಗಿ, ನೆರವಿಗಾಗಿ, ಕ್ರಮಗಳ ತಿಳಿದುಕೊಳ್ಳುವುದಕ್ಕಾಗಿ ಮತ್ತು ಇ-ಹರಾಜು ಆನ್‌ಲೈನ್ ತರಬೇತಿ ಪಡೆದುಕೊಳ್ಳುವುದಕ್ಕಾಗಿ ಭಾವಿ ಬಿಡ್‌ದಾರರು ಮೆ||-4 ಕ್ಲೋಸರ್ ಸಂಪರ್ಕ ಶ್ರೀ ಎಂ ಶ್ರೀನಿವಾಸಲು, ಸಂಪರ್ಕ ಸಂ. **8142000809. Email id: info@bankauctions.in / srinivas@ bankauctions.in.** ಇವರನ್ನು ಸಂಪರ್ಕಿಸುವುದು.

ಷರತ್ತು ಮತ್ತು ನಿಬಂಧನೆಗಳ ಹೆಚ್ಚಿನ ವಿವರಗಳಿಗಾಗಿ ಹಾಗೂ ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕಾಗಿ ಹಾಗೂ ಆಸ್ತಿ ಸಂಬಂಧಿತ ಯಾವುದೇ ವಿವರಗಳಿಗಾಗಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳಾದ ಶ್ರೀ ರಂಜನ್ ನಾಯಕ್, (ಮೊ.ಸಂ. 6362951653), ಶ್ರೀ ಉಮೇಶ್ (ಮೊಬೈಲ್ ಸಂ. 8050149617) ಮತ್ತು ಶ್ರೀಮತಿ ಸಾಯಿದಾ (ಮೊಬೈಲ್ ಸಂ. 7400445147) ಅನ್ನು ಸಂಪರ್ಕಿಸುವುದು. ಅಧಿಕೃತ ಅಧಿಕಾರಿಗಳ ಉತ್ತಮ ತಿಳುವಳಿಕೆ ಮತ್ತು ಮಾಹಿತಿಗೆ ಬಂದಂತೆ ಆಸ್ತಿಗಳ ಮೇಲೆ ಯಾವುದೇ ಋಣಭಾದ್ಯತೆಗಳು ಇಲ್ಲ. ಆದಾಗ್ಯೂ ಇಚ್ಛೆಯುಳ್ಳ ಬಿಡ್‌ದಾರರು ಬಿಡ್ ಸಲ್ಲಿಸುವ ಮುಂಚೆ ಆಸ್ತಿಯ ಋಣಭಾದ್ಯತೆಗಳು ಹಾಗೂ ಸ್ವಾಮ್ಯ ಮುಂತಾದವುಗಳ ಬಗ್ಗೆ ಅವರದೇ ಸ್ವತಂತ್ರ ವಿಚಾರಣೆಗಳನ್ನು ನಡೆಸಿ ತಿಳಿದುಕೊಳ್ಳಬಹುದಾಗಿದೆ. ಷರತ್ತಿನ ಬಿಡ್‌ಗಳನ್ನು ಒಪ್ಪಿಕೊಳ್ಳುವುದಿಲ್ಲ. ಮೇಲೆ ಹೆಸರಿಸಲಾದ. ಸಾಲಗಾರರು/ ಜಾಮೀನುದಾರರು/ ಅಡಮಾನದಾರರುಗಳಿಗೆ ಈ ಮೂಲಕ ಅಧಿಸೂಚಿಸುವುದೇನೆಂದರೆ ಮೇಲೆ ತಿಳಿಸಿದ ಬಾಕಿ ಮೊತ್ತ ಜೊತೆಗೆ ಅಪ್ ಟು ಡೇಟ್ ಬಡ್ಡಿ ಹಾಗೂ ಸಾದಿಲ್ವಾರು ವೆಚ್ಚಗಳನ್ನು ಹರಾಜಿನ ದಿನಾಂಕಕ್ಕೆ ಮುಂಚೆ ಪಾವತಿ ಮಾಡಬೇಕು. ವಿಫಲರಾದಲ್ಲಿ ಮೇಲಿನ ಆಸ್ತಿಯನ್ನು ಮಾರಾಟ ಮಾಡಿ ಸಾಲದ ಬಾಕಿಗಾಗಿ ಹೊಂದಿಸಿಕೊಳ್ಳಲಾಗುವುದು. ಇನ್ನೂ ಬಾಕಿ ಉಳಿದ ಪಕ್ಷದಲ್ಲಿ ಅದನ್ನು ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲು ಮಾಡಿಕೊಳ್ಳಲಾಗುವುದು.

ದಿನಾಂಕ: 17.04.2025, ಸ್ಥಳ: ಕಲಬುರ್ಗಿ

ಸಹಿ/- ಅಧಿಕೃತ ಅಧಿಕಾರಿ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್